# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 29-10-2024ರ ಮಂಗಳವಾರ, ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಡಾ. ಟಿ.ಆರ್. ಚಂದ್ರಶೇಖರ್ | – ಸದಸ್ಯರು |
| 3. | ಶ್ರೀ ಕೆ. ಗೋಕುಲ್ ಗೋವರ್ಧನ್ | – ಸದಸ್ಯರು |
| 4. | ಪ್ರೊ. ಸೋನೆರ್ ನಂದಪ್ಪ | – ಸದಸ್ಯರು |
| 5. | ಡಾ. ಗಣೇಶ್ ಕೆ. | – ಸದಸ್ಯರು |
| 6. | ಡಾ. ಅಂತೋನಿ ಪೌಲ್ ರಾಜ್ ಸಿ. | – ಸದಸ್ಯರು |
| 7. | ಡಾ. ಮುಜೀದಾ ಬಾನು | – ಸದಸ್ಯರು |
| 8. | ಶ್ರೀ ಮಹದೇಶು | – ಸದಸ್ಯರು |
| 9. | ಶ್ರೀ ನಾಗರಾಜು ಸಿ. | – ಸದಸ್ಯರು |
| 10. | ಡಾ. ಬಸವರಾಜು ಸಿ. | – ಸದಸ್ಯರು |
| 11. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | – ಸದಸ್ಯರು |
| 12. | ಡಾ. ಶಿಲ್ಪ ಜೆ. | – ಸದಸ್ಯರು |
| 13. | ಡಾ. ನಟರಾಜು ಹೆಚ್.ಎಸ್. | – ಸದಸ್ಯರು |
| 14. | ಡಾ. ಎನ್. ನಾಗರಾಜ, ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 15. | ಶ್ರೀಮತಿ ವಿ.ಆರ್. ಶೈಲಜ, ಕುಲಸಚಿವರು | – ಸದಸ್ಯ ಕಾರ್ಯದರ್ಶಿ |
| 16. | ಶ್ರೀಮತಿ ರೇಖಾ ಕೆ.ಎಸ್., ಹಣಕಾಸು ಅಧಿಕಾರಿ | – ವಿಶೇಷ ಆಹ್ವಾನಿತರು |

**ಅನುಪಸ್ಥಿತರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್, ಪ್ರಾಂಶುಪಾಲರು, ಆರ್‌ಐಇ, ಮೈಸೂರು

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಕುಲಪತಿಯವರು ಸಭೆಯ ಕಾರ್ಯಸೂಚಿಗಳನ್ನು ಮಂಡಿಸುವ ಮುನ್ನ ಪ್ರಾಸ್ತಾವಿಕವಾಗಿ ಈ ಕೆಳಕಂಡ ವಿಚಾರಗಳನ್ನು ಸಭೆಯ ಗಮನಕ್ಕೆ ತಂದರು.

- ಮೈಸೂರು ವಿಶ್ವವಿದ್ಯಾನಿಲಯದ 105ನೇ ವಾರ್ಷಿಕ ಘಟಿಕೋತ್ಸವವನ್ನು ನವೆಂಬರ್/ಡಿಸೆಂಬರ್ 2024ರ ಮಾಹೆಯಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದ್ದು, ಈ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಗಣ್ಯರ ಹೆಸರುಗಳನ್ನು ಪರಿಶೀಲನಾ ಸಮಿತಿಯಲ್ಲಿ ಮಂಡಿಸಲು ಸಿಂಡಿಕೇಟ್ ಸದಸ್ಯರುಗಳು ಶಿಫಾರಸ್ಸು ಪಟ್ಟಿಯನ್ನು ಒಂದು ವಾರದೊಳಗಾಗಿ ಸಲ್ಲಿಸಬಹುದು ಎಂದು ತಿಳಿಸಿದರು.
- ಪ್ರೊ. ಸೋನೆರ್ ನಂದಪ್ಪ ಇವರು ಅಕ್ಟೋಬರ್ 2024ರಲ್ಲಿ ವಯೋನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ, ಅವರಿಗೆ ಸದರಿ ಸಭೆಯು ಅಂತಿಮ ಸಭೆಯಾಗಿದ್ದು, ಸಿಂಡಿಕೇಟ್ ಸದಸ್ಯರಾಗಿ ಉನ್ನತ

ಶಿಕ್ಷಣದ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾ ಅಭಿನಂದನೆಗಳನ್ನು ಸಲ್ಲಿಸಲಾಯಿತು.

- ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ಪ್ರತಿ ವರ್ಷ ನವೆಂಬರ್ 01 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಗುತ್ತಿತ್ತು. ಈ ವರ್ಷದಿಂದ ಕನ್ನಡ ರಾಜ್ಯೋತ್ಸವವನ್ನು ಕ್ರಾಫರ್ಡ್ ಭವನ ಆವರಣದಲ್ಲಿಯೇ ಅಧಿಕೃತವಾಗಿ ಆಚರಿಸಲು ಉದ್ದೇಶಿಸಲಾಗಿದ್ದು, ಆದರೆ ದೀಪಾವಳ ಹಬ್ಬದ ಪ್ರಯುಕ್ತ ಸಾಲಾಗಿ ಸಾರ್ವತ್ರಿಕ ರಜೆಗಳಿರುವುದರಿಂದ, ಈ ಕಾರ್ಯಕ್ರಮಕ್ಕೆ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಪ್ರಮಾಣವು ಕಡಿಮೆಯಾಗುವುದನ್ನು ಮನಗಂಡು ದಿನಾಂಕ: 07-11-2024 ರಂದು ಆಚರಿಸಲಾಗುವುದು. ಈ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ್ದ ಖ್ಯಾತ ಚಲನಚಿತ್ರ ನಿರ್ದೇಶಕರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿದೆ.
- ಯುಜಿಸಿ-ಸಿಎಎಸ್ ಅಡಿಯಲ್ಲಿ ಅರ್ಹ ಸಹಾಯಕ ಪ್ರಾಧ್ಯಾಪಕರಿಂದ ಸಹ ಪ್ರಾಧ್ಯಾಪಕರಾಗಿ, ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರಾಗಿ ಹಾಗೂ ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಲು ದಿನಾಂಕ 26.09.2024 ಮತ್ತು 27.09.2024ರಂದು ನಡೆದ ಆಯ್ಕೆ ಮಂಡಳ ಸಭೆಯ ಶಿಫಾರಸ್ಸಿನಂತೆ ಕ್ರಮವಹಿಸಲಾಗುವುದೆಂದರು.

ಹಾಗೂ

ಮಾನ್ಯ ಕುಲಪತಿಗಳು ಮುಂದುವರಿದು ಮಾತನಾಡಿ, ಸುಮಾರು 3-4 ವರ್ಷಗಳಂದ ಸಿಂಡಿಕೇಟ್ ಸಭೆಯ ನಡಾವಳಯನ್ನು ಗಮನಿಸಿದರೆ, ಪ್ರತಿ ಸಿಂಡಿಕೇಟ್ ಸದಸ್ಯರು ಸಭೆಯಲ್ಲಿ ಚರ್ಚಿಸುವ ಎಲ್ಲಾ ವಾಕ್ಯಗಳನ್ನು ನಡಾವಳಯಲ್ಲಿ ಸೇರ್ಪಡೆಗೊಳಿಸಿ ಪುಟಗಟ್ಟಲೆ ನಡಾವಳ ಸಿದ್ಧವಾಗುತ್ತಿದೆ ಮತ್ತು ವಿಷಯಕ್ಕೆ ಸಂಬಂಧಿಸಿದ ಚರ್ಚೆಯು ಐದು ನಿಮಿಷಗಳಿಗೆ ಮಾತ್ರ ಸೀಮಿತಗೊಳಿಸಬೇಕೆಂದು ಅಧಿನಿಯಮದಲ್ಲಿರುತ್ತದೆಂದು ತಿಳಿಸುವ ಮೂಲಕ ಸಿಂಡಿಕೇಟ್ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಅಧಿನಿಯಮದಲ್ಲಿರುವ ಈ ಕೆಳಕಂಡ ಕೆಲವೊಂದು ಅಂಶಗಳನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು.

- ಸಭೆಯಲ್ಲಿ ಎತ್ತಲಾಗುವ ಯಾವುದೇ ಕ್ರಿಯಾ ಲೋಪಕ್ಕೆ ಸಂಬಂಧಿಸಿದಂತೆ ಅಧ್ಯಕ್ಷರ ತೀರ್ಮಾನವೇ ಕೊನೆಯದು.
- ಗೊತ್ತುವಳಿಯನ್ನು ಮಂಡಿಸಿದವರ ಹೊರತು ಬೇರೆ ಯಾವ ಸದಸ್ಯರಿಗೂ ಒಂದು ಗೊತ್ತುವಳಿ ಅಥವಾ ತಿದ್ದುಪಡಿಯ ಬಗ್ಗೆ ಚರ್ಚೆಯ ಸಮಯದಲ್ಲಿ ಒಂದು ಸಲಕ್ಕಿಂತ ಹೆಚ್ಚಾಗಿ ಮಾತನಾಡುವ ಹಕ್ಕು ಇರುವುದಿಲ್ಲ. ಗೊತ್ತುವಳಿಯನ್ನು ಮಂಡಿಸಿರುವವರಿಗೆ ಮಾತ್ರ ಚರ್ಚೆಯ ಮುಕ್ತಾಯದ ಹಂತದಲ್ಲಿ ಉತ್ತರಿಸುವ ಹಕ್ಕು ಇರುತ್ತದೆ. ಆದರೆ, ಚರ್ಚೆಯ ಮುಕ್ತಾಯದಲ್ಲಿ ಹಾಗೂ ಗೊತ್ತುವಳಿ ಮಂಡಿಸಿರುವವರು ಉತ್ತರಿಸಲು ಆರಂಭಿಸುವ ಮೊದಲು, ಸದಸ್ಯರು ಅವರೆವಿಗೆ ನಡೆದಿರುವ ಚರ್ಚೆಯ ಬೆಳಕಿನಲ್ಲಿ ಯಾವುದಾದರೂ ವಿಷಯವನ್ನು ತಿಳಿಯಪಡಿಸಬೇಕೆಂದಲ್ಲಿ, ಐದು ನಿಮಿಷಗಳಿಗಿಂತ ಹೆಚ್ಚು ಕಾಲಾವಕಾಶ ತೆಗೆದುಕೊಳ್ಳದೆ, ಹಾಗೆ ಮಾಡತಕ್ಕದ್ದು. ಅಧ್ಯಕ್ಷರ ಅನುಮತಿ ಪಡೆದ ಹೊರತು ಯಾರ ಭಾಷಣವೇ ಆಗಲಿ ಅದು ಹತ್ತು ನಿಮಿಷಗಳಿಗಿಂತ ಹೆಚ್ಚಿನ ಅವಧಿಯದಾಗಿರಕೂಡದು. ಅಧ್ಯಕ್ಷರು ವಿವೇಚನೆಯನುಸಾರ ಹೆಚ್ಚು ಕಾಲಾವಕಾಶ ನೀಡಬಹುದು. ಚರ್ಚೆಯ ಕ್ರಮವನ್ನು ಅಧ್ಯಕ್ಷರು ನಿಯಂತ್ರಿಸತಕ್ಕದ್ದು.
- ಚರ್ಚೆಯ ಮುಂದೂಡಿಕೆ ಅಥವಾ ಅದನ್ನು ಮುಕ್ತಾಯಗೊಳಿಸುವ ಬಗ್ಗೆ ಪ್ರತ್ಯೇಕ ಪ್ರಶ್ನೆಯಾಗಿ ಗೊತ್ತುವಳಿಯನ್ನು ಮಂಡಿಸಬಹುದು. ಇದನ್ನು ತಿದ್ದುಪಡಿಯ ರೂಪದಲ್ಲಾಗಲೀ ಅಥವಾ ಬೇರೆ ಸದಸ್ಯರು ಮಾತನಾಡುತ್ತಿರುವಾಗಲಾಗಲೀ ಮಂಡಿಸುವಂತಿಲ್ಲ. ಚರ್ಚೆಯ ಮುಂದೂಡಿಕೆಯ ಬಗ್ಗೆ ಗೊತ್ತುವಳಿ ಅಂಗೀಕೃತವಾದಲ್ಲಿ ಅಂಥ ಚರ್ಚೆ ಮುಂದಿನ ಸಭೆಯಲ್ಲಿ ಬರತಕ್ಕದ್ದು. ಮುಕ್ತಾಯದ ಬಗ್ಗೆ ಗೊತ್ತುವಳಿ ಅಂಗೀಕೃತವಾದಲ್ಲಿ ಪ್ರಸಂಗಾನುಗುಣವಾಗಿ ಮುಖ್ಯ

ಗೊತ್ತುವಳಿಯನ್ನು ಅಥವಾ ಅದರ ಬಗೆಗಿನ ತಿದ್ದುಪಡಿಯನ್ನು ಮಂಡಿಸಿದವರು ಉತ್ತರ ನೀಡಿದ ತಕ್ಷಣವೆ ಅದನ್ನು ಮತಕ್ಕೆ ಹಾಕತಕ್ಕದ್ದು.

- ಅಧ್ಯಕ್ಷರ ಅನುಮತಿಯೊಡನೆ ಯಾವ ಸದಸ್ಯರೂ ವಾಸ್ತವ ಸಂಗತಿಯ ಬಗೆಗಿನ ತಪ್ಪು ಕಲ್ಪನೆಯನ್ನು ನಿವಾರಿಸುವ ಸಲುವಾಗಿ ವೈಯಕ್ತಿಕ ವಿವರಣೆ ನೀಡಲು ಪ್ರಯತ್ನಿಸಬಹುದು; ಆದರೆ ಹಾಗೆ ಮಾಡುವಲ್ಲಿ ಸದಸ್ಯರ ಹೇಳಿಕೆ ವಸ್ತುಸ್ಥಿತಿಯ ಬಗ್ಗೆ ವಿವರಣೆಗೆ ಮಾತ್ರ ಸೀಮಿತವಾಗಿದ್ದು, ಅವರ ಭಾಷಣ ಐದು ನಿಮಿಷಗಳಿಗಿಂತ ಹೆಚ್ಚು ಅವಧಿಯದಾಗಿರಕೂಡದು.
- ಚರ್ಚೆಯ ಯಾವುದೇ ಹಂತದಲ್ಲಿ ಯಾವ ಸದಸ್ಯರಾದರೂ ಕ್ರಿಯಾಲೋಪವನ್ನೆತ್ತಬಹುದು ಹಾಗೂ ಆ ಬಗ್ಗೆ ಅಧ್ಯಕ್ಷರ ಗಮನ ಸೆಳೆಯಬಹುದು. ಸದಸ್ಯರೊಬ್ಬರು ಭಾಷಣ ಮಾಡುತ್ತಿರುವಾಗ ಮತ್ತೊಬ್ಬರು ಕ್ರಿಯಾಲೋಪ ಎತ್ತಿದರೆ, ಅಧ್ಯಕ್ಷರು ತೀರ್ಮಾನ ಕೈಗೊಳ್ಳುವವರೆವಿಗೆ ಭಾಷಣಕಾರರು ತಕ್ಷಣವೇ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕದ್ದು.
- ಯಾವುದೇ ವಿಷಯದ ಬಗ್ಗೆ ಸಭೆಯಲ್ಲಿ ಕೈಗೊಳ್ಳಲಾದ ತೀರ್ಮಾನವನ್ನು ತಕ್ಷಣವೇ ದಾಖಲು ಮಾಡಿಕೊಂಡು, ಅದನ್ನು ಅನುಮೋದನೆಗಾಗಿ ಸಿಂಡಿಕೇಟಿನ ಮುಂದೆ ಓದತಕ್ಕದ್ದು.
- ಸಿಂಡಿಕೇಟ್ ಕೈಗೊಂಡ ತೀರ್ಮಾನದ ಬಗ್ಗೆ ಯಾವ ಸದಸ್ಯರಾದರೂ ಭಿನ್ನಮತ ತಳೆದಿದ್ದು, ತಮ್ಮ ಭಿನ್ನಮತದ ಬಗ್ಗೆ ಟಿಪ್ಪಣಿ ನೀಡಲು ಇಚ್ಛೆ ವ್ಯಕ್ತಪಡಿಸಿದಲ್ಲಿ, ಸಭೆ ಮುಕ್ತಾಯಗೊಳ್ಳುವ ಮೊದಲು ಹಾಗೆ ಮಾಡಬಹುದು. ಅಂಥ ಟಿಪ್ಪಣಿ ಯಾವಾಗಲೂ ಸಂಕ್ಷಿಪ್ತವಾಗಿರತಕ್ಕದ್ದು ಮತ್ತು ಚರ್ಚೆಯ ಮುಖ್ಯ ವಿಷಯಕ್ಕೆ ಸೀಮಿತವಾಗಿರತಕ್ಕದ್ದು. ಯಾವುದೇ ರೀತಿಯ ವೈಯಕ್ತಿಕ ಟೀಕೆಗಳಾಗಲೀ ಉದ್ದೇಶಗಳನ್ನು ಆರೋಪಿಸುವುದಕ್ಕಾಗಲೀ ಅವಕಾಶ ಇರುವುದಿಲ್ಲ.

ಇನ್ನು ಮುಂದೆ ಮೇಲ್ಕಂಡ ಅಧಿನಿಯಮದನ್ವಯ ಕ್ರಮವಹಿಸುವುದು ಹಾಗೂ ಸಿಂಡಿಕೇಟ್ ಸಭೆಯಲ್ಲಿ ಸವಿಸ್ತಾರವಾದ ಚರ್ಚೆಯಲ್ಲಿ ಪ್ರಮುಖ ಅಂಶಗಳನ್ನು ಮಾತ್ರ ನಡಾವಳಿಯಲ್ಲಿ ಸೇರ್ಪಡೆಗೊಳಿಸಲಾಗುವುದೆಂದು ತಿಳಿಸಿದರು.

ತದನಂತರ, ಮಾನ್ಯ ಕುಲಪತಿಯವರ ಅಪ್ಪಣೆಯ ಮೇರೆಗೆ ಕುಲಸಚಿವರು ಈ ಕೆಳಕಂಡ ಕಾರ್ಯಸೂಚಿಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **ದಿನಾಂಕ: 20-09-2024ರಂದು ಜರುಗಿದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.** | |
| ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ಹಲವಾರು ವಿಷಯಗಳನ್ನು ಕಾರ್ಯಸೂಚಿಯಲ್ಲಿ ಸೇರಿಸದೇ ವಿಷಯಗಳನ್ನು ಪ್ರಸ್ತಾಪಿಸಿರುತ್ತೀರಿ. ಉದಾಹರಣೆಗೆ ಅಧ್ಯಾಪಕ ವೃಂದದ ಉದ್ಯೋಗಿಗಳಿಗೆ ಯುಜಿಸಿ-ಸಿಎಎಸ್ ಅಡಿಯಲ್ಲಿ ಪದೋನ್ನತಿ ನೀಡಲು ಕಾರ್ಯಸೂಚಿಯಲ್ಲಿ ವಿಷಯವನ್ನು ಸೇರಿಸದೇ ಸಭೆ ಪ್ರಾರಂಭವಾಗುವ ಮುನ್ನ ವಿಷಯವನ್ನು ಚರ್ಚೆಗೆ ತರುತ್ತೀರಿ. ನಂತರ ನಡಾವಳಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಕಾರ್ಯಸೂಚಿಯ ಸಂಖ್ಯೆಯನ್ನು ನೀಡಿ ನಡಾವಳಿಯನ್ನು ಸಿದ್ಧಪಡಿಸಿರುತ್ತೀರಿ. ಇದೇ ರೀತಿ GeM Portal ನಲ್ಲಿ ಟೆಂಡರ್ ಆಹ್ವಾನಿಸಿರುವ ವಿಷಯವನ್ನು ಸಹ ಕಾರ್ಯಸೂಚಿಯಲ್ಲಿ ಸೇರಿಸಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಅಧ್ಯಾಪಕ ವೃಂದದ ನೇಮಕಾತಿ/ಮುಂಬಡ್ತಿ ನೀಡುವ ಕ್ರಮವನ್ನು ಯುಜಿಸಿ ನಿಯಮಗಳಡಿ ಕ್ರಮವಹಿಸಬೇಕಾಗಿರುತ್ತದೆ. ಅದರಂತೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಧ್ಯಯನ ವಿಭಾಗಗಳಲ್ಲಿನ ಅಧ್ಯಾಪಕರುಗಳಿಗೆ ಯುಜಿಸಿ-ಸಿಎಎಸ್ ಅಡಿಯಲ್ಲಿ ಪದೋನ್ನತಿ ನೀಡುವಾಗ ಆಯ್ಕೆ ಮಂಡಳಿಯ ಶಿಫಾರಸ್ಸಿನನ್ವಯ ಕ್ರಮವಹಿಸಲಾಗುತ್ತಿದೆ. ಇದು ಅತ್ಯಂತ ಗೌಪ್ಯತೆಯಿಂದ ಕೂಡಿರುವ ವಿಷಯವಾಗಿರುವುದರಿಂದ, ಕಳೆದ ಹಲವಾರು ವರ್ಷಗಳಿಂದಲೂ ಸಹ ಇಂತಹ ವಿಷಯಗಳನ್ನು ಕಾರ್ಯಸೂಚಿಯಲ್ಲಿ ಸೇರಿಸದೆಯೇ ನೇರವಾಗಿ ಸಭೆ ಪ್ರಾರಂಭವಾಗುವ ಮುನ್ನ ವಿಷಯವನ್ನು ಮಂಡಿಸಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. | |

| | |
|---|---|
| ದಿನಾಂಕ: 20-09-2024ರಂದು ಜರುಗಿದ "ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆ"ಯ ನಡವಳಿಯನ್ನು ಹಾಗೂ ತೆಗೆದುಕೊಂಡಿರುವ ಕ್ರಮವನ್ನು ದೃಢೀಕರಿಸಲಾಯಿತು. | |
| ಸಾಮಾನ್ಯ ಸಭೆ 2024/7.1 | ಮನೋವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ರ ಪ್ರಕಾರ ಪ್ರೊ. ಸಂಪತ್ ಕುಮಾರ್, ಪ್ರಾಧ್ಯಾಪಕರು, ಮನೋವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 31-12-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮನೋವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/7.2 | ಕಾನೂನು ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ರ ಪ್ರಕಾರ ಪ್ರೊ. ಸುರೇಶ್ ಬೆಂಜಮಿನ್, ಪ್ರಾಧ್ಯಾಪಕರು, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-11-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/7.3 | ಗಣಕ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ರ ಪ್ರಕಾರ ಪ್ರೊ. ಹನುಮಂತಪ್ಪ ಜೆ, ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 22-11-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/7.4 | Food Science and Technology (PG) ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 33 (1) ಮತ್ತು (2) ರ ಪ್ರಕಾರ ದಿನಾಂಕ: 20-09-2024 ರಿಂದ ಜಾರಿಗೆ ಬಂದಂತೆ ಮೂರು ವರ್ಷಗಳ ಅವಧಿಗೆ **Food Science and Technology (PG)** ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಲು ಸಿಂಡಿಕೇಟ್ ಸಬೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2024/7.5 | 2025ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರುಗಳಿಗೆ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ಅಧ್ಯಾಪಕೇತರರು ಹಾಗೂ ತಾಂತ್ರಿಕ ವರ್ಗದ ಉದ್ಯೋಗಿಗಳು 2025ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದಲು ಸಿಂಡಿಕೇಟ್ ಸಭೆಯು ಅನುಮತಿಸಿತು. |

| | |
|---|---|
| ಸಾಮಾನ್ಯ ಸಭೆ 2024/7.6 | ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಹಾಗೂ ಇನ್ನಿತರ ವಹಿವಾಟಿಗೆ ಸಂಬಂಧಿಸಿದಂತೆ ಶುಲ್ಕಗಳ ವಹಿವಾಟನ್ನು ನಿರ್ವಹಿಸಲು ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಹೆಚ್.ಡಿ.ಎಫ್.ಸಿ. (HDFC) ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದಿರುವ ಬಗ್ಗೆ. |
| | ಹಣಕಾಸು ಅಧಿಕಾರಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಹಾಗೂ ಇನ್ನಿತರ ವಹಿವಾಟನ್ನು ನಿರ್ವಹಿಸಲು ಹೆಚ್.ಡಿ.ಎಫ್.ಸಿ. (HDFC) ಬ್ಯಾಂಕ್‌ನವರು ಉಚಿತವಾಗಿ Customised Solution ನ್ನು ವಿಶ್ವವಿದ್ಯಾನಿಲಯಕ್ಕೆ ನೀಡಲು ಒಪ್ಪಿದ ಹಿನ್ನೆಲೆಯಲ್ಲಿ, ಹೆಚ್.ಡಿ.ಎಫ್.ಸಿ. ಬ್ಯಾಂಕ್, ಸರಸ್ವತಿಪುರಂ ಶಾಖೆಯಲ್ಲಿ ನೂತನವಾಗಿ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಉಳಿತಾಯ ಖಾತೆ ತೆರೆದಿದ್ದು, ವಿದ್ಯಾರ್ಥಿಗಳು E-payment, UPI ಮೂಲಕ ಪ್ರವೇಶಾತಿ ಶುಲ್ಕಗಳನ್ನು ಜಮಾ ಮಾಡಲು ತೆಗೆದುಕೊಂಡಿರುವ ಕ್ರಮವನ್ನು ದಿನಾಂಕ 10-06-2024ರಂದು ನಡೆದ ಹಣಕಾಸು ಸಮಿತಿ ಸಭೆಯು ಅನುಸಮರ್ಥಿಸಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಟಿ.ಆರ್ ಚಂದ್ರಶೇಖರ್ ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಖಾತೆಗಳ ಮೂಲಕ ಹಣಕಾಸು ವಹಿವಾಟನ್ನು ನಡೆಸಲಾಗುತ್ತದೆ ಹಾಗೂ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಿನ ಶುಲ್ಕಗಳು ಹಾಗೂ ಇತರೆ ವೆಚ್ಚಗಳ ಕುರಿತು ವಾರ್ಷಿಕವಾಗಿ ಎಷ್ಟು ವಹಿವಾಟನ್ನು ನಡೆಸುವಿರಿ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಯ ಮೂಲಕ ಒಟ್ಟು 27 ಖಾತೆಗಳಲ್ಲಿ ಹಣಕಾಸು ವಹಿವಾಟನ್ನು ನಡೆಸಲಾಗುತ್ತಿದ್ದು ಇದಲ್ಲದೆ ವಿಶ್ವವಿದ್ಯಾನಿಲಯದ ಇತರ ಕಛೇರಿಗಳು/ ಅಧ್ಯಯನ ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿಯೂ ಪ್ರತ್ಯೇಕವಾಗಿ ಬಟವಾಡೆ ಅಧಿಕಾರಿ/ಕಛೇರಿ ಮುಖ್ಯಸ್ಥರ ಹೆಸರಿನಲ್ಲಿ ಹಲವಾರು ಖಾತೆಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹೊಂದಿದ್ದು, ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಂದ ವಸೂಲಾಗುವ ಶುಲ್ಕ ಹಾಗೂ ಇನ್ನಿತರ ವೆಚ್ಚಗಳ ರೂಪದಲ್ಲಿ ವಾರ್ಷಿಕವಾಗಿ ರೂ.10 ಕೋಟಿಗಳಿಗೂ ಅಧಿಕವಾಗಿ ಹಣಕಾಸಿನ ವಹಿವಾಟನ್ನು ನಡೆಸಲಾಗುತ್ತಿದೆಯೆಂದು ತಿಳಿಸಿದರು.<br><br>ಡಾ. ಟಿ.ಆರ್ ಚಂದ್ರಶೇಖರ್ ರವರು ಮಾತನಾಡಿ, ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಬದಲಾಗಿ ಕೋಟಕ್ ಬ್ಯಾಂಕ್ ಹಾಗೂ ಐಡಿಎಫ್‌ಸಿ ಬ್ಯಾಂಕ್‌ನಲ್ಲಿ ಹಣ ಹೂಡಿಕೆ ಮಾಡಿದಲ್ಲಿ, ಚಾಲ್ತಿ ಖಾತೆ ಹಾಗೂ ಉಳಿತಾಯ ಖಾತೆಯನ್ನು ತೆರೆದಲ್ಲಿ, ಸದರಿ ಬ್ಯಾಂಕ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುವುದರೊಂದಿಗೆ ವಿಶ್ವವಿದ್ಯಾನಿಲಯಕ್ಕೂ ಸಹ ಹೆಚ್ಚಿನ ಲಾಭಾಂಶ ಬರುವುದಾಗಿ ಹಾಗೂ ಉಳಿತಾಯ/ ಚಾಲ್ತಿ ಖಾತೆಗೆ ವಾರ್ಷಿಕವಾಗಿ 7 ರಿಂದ 7.5% ರಷ್ಟು ಬಡ್ಡಿಯನ್ನು ಸದರಿ ಬ್ಯಾಂಕಿನವರು ನೀಡುವರೆಂದು ತಿಳಿಸುತ್ತಾ, ಪ್ರಸ್ತುತ ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ವ್ಯವಹರಿಸುವುದರ ಬದಲಾಗಿ ಮೇಲೆ ತಿಳಿಸಿರುವ ಎರಡು ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ವ್ಯವಹರಿಸಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೆಚ್ಚು ಸಹಕಾರವಾಗುವುದೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಈಗಾಗಲೇ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲತೆಗೆ ತಕ್ಕಂತೆ ಹೆಚ್‌ಡಿಎಫ್‌ಸಿ ಬ್ಯಾಂಕ್‌ನವರು ಇ-ಪೇಮಂಟ್ ಗೇಟ್‌ವೇ ಮತ್ತಿತರ ಸೌಲಭ್ಯಗಳನ್ನು ಒದಗಿಸಿರುವುದರಿಂದ, ಸದರಿ ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯಲಾಗಿದೆ ಅದುದರಿಂದ ಇದಕ್ಕೆ ಅನುಸಮರ್ಥನೆ ನೀಡುವಂತೆ ಮತ್ತೊಮ್ಮೆ ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ (HDFC) ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯಲಾಗಿದೆ. ಡಾ. ಟಿ.ಆರ್.ಚಂದ್ರಶೇಖರ್ ರವರ ಸಲಹೆಯಂತೆ ಎಲ್ಲಾ ಬ್ಯಾಂಕ್‌ಗಳಿಂದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಪರಿಶೀಲಿಸುವುದು ಹಾಗೂ ಸದರಿ ಬ್ಯಾಂಕ್‌ಗಳಲ್ಲಿ ಯಾವ ಬ್ಯಾಂಕ್‌ನವರು ಹೆಚ್ಚು ಸೌಲಭ್ಯ ಹಾಗೂ ಉಳಿತಾಯ ಖಾತೆ/ ಚಾಲ್ತಿ ಖಾತೆಯಲ್ಲಿ ವ್ಯವಹರಿಸಿದಲ್ಲಿ ವಾರ್ಷಿಕವಾಗಿ ಹೆಚ್ಚಿನ ಬಡ್ಡಿಯನ್ನು ನೀಡುವರೋ ಆ ಬ್ಯಾಂಕ್‌ನ ಮೂಲಕ ಮುಂಬರುವ ವರ್ಷದಿಂದ ವ್ಯವಹರಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು. |

| | |
|---|---|
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಗಳ ವಹಿವಾಟನ್ನು ನಿರ್ವಹಿಸಲು ಹೆಚ್.ಡಿ.ಎಫ್.ಸಿ. (HDFC) ಬ್ಯಾಂಕ್, ಸರಸ್ವತಿಪುರಂ ಶಾಖೆಯಲ್ಲಿ ಹೊಸದಾಗಿ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದು ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. (ಮುಂಬರುವ ವರ್ಷಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೆಚ್ಚು ಸಹಕಾರಿಯಾಗುವ ಇತರೆ ಯಾವುದಾದರೂ ಬ್ಯಾಂಕ್‌ನ್ನು ಸಂಪರ್ಕಿಸಿ, ಸದರಿ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಬಡ್ಡಿ ಹಾಗೂ ಹೆಚ್ಚಿನ ಸೌಲಭ್ಯವನ್ನು ವಿಶ್ವವಿದ್ಯಾನಿಲಯಕ್ಕೆ ಒದಗಿಸುವ ಬ್ಯಾಂಕ್‌ನೊಂದಿಗೆ ವ್ಯವಹರಿಸುವುದು ಸೂಕ್ತವೆಂದು ಸಿಂಡಿಕೇಟ್ ಸದಸ್ಯರುಗಳು ಸಲಹೆ ನೀಡಿದರು).** |
| ಸಾಮಾನ್ಯ ಸಭೆ 2024/7.7 | ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| | ಡಾ. ಟಿ.ಆರ್.ಚಂದ್ರಶೇಖರ್‌ರವರು ಮಾತನಾಡಿ, ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್‌ರವರು ಕೇರ್ ಆಫ್ ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿರುವುದರ ಕುರಿತು ವಿವರಣೆ ಕೋರಿದರು.<br><br>ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್‌ರವರು Specialized Programme ಅಡಿಯಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿ, ಸದರಿ ಕೋರ್ಸುಗಳಿಗೆ ಅವಶ್ಯವಿರುವ ಸ್ಥಳಾವಕಾಶಕ್ಕೆ ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ ಇವರ ಕಟ್ಟಡವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್‌ರವರು Specialized Programme ಅಡಿಯಲ್ಲಿ B.Des. (Fashion Design & Management) B.Des. (Interior Design & Management) ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿದ್ದು, ಸದರಿ ಕೋರ್ಸ್‌ಗಳನ್ನು ಬೇರೆ ಯಾರು ಪ್ರಾರಂಭಿಸಿಲ್ಲವೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ C/o ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾ., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 2024-25ನೇ ಸಾಲಿನಿಂದ B.Des. (Fashion Design & Management ) 40 intake ಮತ್ತು B.Des. (Interior Design & Management) 40 intake ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/7.8 | ಡಾ. ಮಧುಸೂದನ್ ಎ.ಪಿ.ರವರು ಪಿಎಚ್.ಡಿ. ಪ್ರಬಂಧವನ್ನು "ಕೃತಿಚೌರ್ಯ" ಮಾಡಿರುವುದರ ಆರೋಪದ ಬಗ್ಗೆ. |
| | ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, 2016ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಡಾ. ಜಯಶ್ರೀ ಪಿ. ಇವರ ಮಾರ್ಗದರ್ಶನದಲ್ಲಿ ಸತೀಶ್‌ಕುಮಾರ್ ಎನ್ ಎಸ್ ಇವರು ಸಲ್ಲಿಸಿರುವ ಪಿಹೆಚ್.ಡಿ ಮಹಾಪ್ರಬಂಧದ ಅಂಶಗಳನ್ನು ಯಥಾವತ್ತಾಗಿ 2019ರಲ್ಲಿ ಮಾನವಶಾಸ್ತ್ರ ವಿಭಾಗದಿಂದ ಡಾ. ವಿಜೇಯೇಂದ್ರ ಬಿ.ಆರ್. ಇವರ ಮಾರ್ಗದರ್ಶನದಲ್ಲಿ ಮಧೂಸೂಧನ್ ಎ.ಪಿ. ರವರು "ಕೃತಿಚೌರ್ಯ" ಮಾಡಿರುವುದಾಗಿ ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ವಿಶ್ವವಿದ್ಯಾನಿಲಯಕ್ಕೆ ಬಂದ ದೂರಿನ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯವು ತಜ್ಞರ ಸಮಿತಿಯನ್ನು ರಚಿಸಿ ಸಮಿತಿಯಿಂದ ವರದಿಯನ್ನು ಪಡೆದಿರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಕೃತಿಚೌರ್ಯದ ಆರೋಪ ಬಂದ ಹಿನ್ನೆಲೆಯಲ್ಲಿ |

| | |
|---|---|
| | ಪರಿಶೀಲಿಸಿದಾಗ ಡಾ. ಸತೀಶ್‌ಕುಮಾರ್ ಎನ್.ಎಸ್. ರವರ ಪಿಹೆಚ್.ಡಿ ಪದವಿಗಾಗಿ ಮಂಡಿಸಿದ ಮಹಾಪ್ರಬಂಧವನ್ನು ಯಥಾವತ್ತಾಗಿ ಡಾ. ಮಧೂಸೂಧನ್ ಎ.ಪಿ. ರವರು ಕೃತಿಚೌರ್ಯ ಎಸಗಿರುವುದು ಸಾಬೀತಾಗಿದ್ದು, ಪಿಹೆಚ್.ಡಿ. ನಿಯಮಾವಳಿ ಕಲಂ 8.9 (ಬಿ) ಅನ್ವಯ ಡಾ. ಮಧುಸೂಧನ್ ಎ.ಪಿ. ಹಾಗೂ ಮಾರ್ಗದರ್ಶಕರಾದ ಡಾ. ವಿಜಯೇಂದ್ರ ಬಿ ಆರ್ ರವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗೆ ಡಾ. ಮಧುಸೂಧನ್ ಎ.ಪಿ. ರವರು ಮಾತ್ರ ಸಮಜಾಯಿಷಿ ನೀಡಿರುತ್ತಾರೆಂದು ತಿಳಿಸಿದರು.<br><br>ಡಾ. ಹೆಚ್.ಎಸ್. ನಟರಾಜ್ ಅವರು ಮಾತನಾಡಿ, ಡಾ. ಮಧುಸೂಧನ್ ಎ.ಪಿ.ರವರು ಸಲ್ಲಿಸಿರುವ ಮಹಾಪ್ರಬಂಧವು ಡಾ. ಸತೀಶ್‌ಕುಮಾರ್ ಎನ್.ಎಸ್. ರವರು ಸಲ್ಲಿಸಿರುವ ಮಹಾಪ್ರಬಂಧವು ಒಂದೇಯಾಗಿರುತ್ತದೆ. ಆದರೆ ಡಾ. ಸತೀಶ್ ಕುಮಾರ್ ಎನ್.ಎಸ್. ರವರು ಸಲ್ಲಿಸಿರುವ ಮಹಾಪ್ರಬಂಧವು ಯಥಾವತ್ತಾಗಿ ಕೃತಿಚೌರ್ಯವಾಗಿದೆ ಎಂದು ವಿಶ್ವವಿದ್ಯಾನಿಲಯಕ್ಕೆ ದೂರು ಸಲ್ಲಿಸಿದ್ದಾರೆಯೇ ಎಂದು ಕೇಳಿದರು. ಕೃತಿಚೌರ್ಯವಾಗಿದೆ ಎಂಬುದರ ಬಗ್ಗೆ ದೂರು ಸಲ್ಲಿಸಿರುವವರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟವರಲ್ಲ. Plagiarism Check ಮಾಡಿರುವುದರಲ್ಲಿಯೂ ಲೋಪವಾಗಿದೆ. ಸದರಿ ಲೋಪವನ್ನೆಸಗಿರುವವರ ಮೇಲೆ ಕ್ರಮವಹಿಸಬೇಕೆಂದು ತಿಳಿಸಿದರು.<br><br>ಡಾ. ಬಸವರಾಜು ರವರು ಮಾತನಾಡಿ, ಡಾ.ಮಧುಸೂಧನ್ ಎ.ಪಿ.ರವರು ಕೃತಿಚೌರ್ಯ ಎಸಗಿರುವುದು ಸಾಬೀತಾಗಿರುವುದರಿಂದ ಅವರ ಮಹಾಪ್ರಬಂಧವನ್ನು Plagiarism Check ಮಾಡಿರುವ ಉದ್ಯೋಗಿಯ ಮೇಲೆ ಶಿಸ್ತು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು ಹಾಗೂ ಡಾ. ಬಸವರಾಜು .ಸಿ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಶ್ರೀ ಗೋಕುಲ್ ಗೋವರ್ಧನ್ ಹಾಗೂ ಶ್ರೀ ನಾಗರಾಜು ರವರು ಸಹ ದನಿಗೂಡಿಸಿದರು. |
| ತೀರ್ಮಾನ | **ಡಾ. ಮಧುಸೂದನ್ ಎ.ಪಿ ಅವರು ಮಾನವಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ವಿಶ್ವವಿದ್ಯಾನಿಲಯಕ್ಕೆ ಮಂಡಿಸಿರುವ ಮಹಾಪ್ರಬಂಧಕ್ಕೆ ವಿಶ್ವವಿದ್ಯಾನಿಲಯವು ಮಾನವಶಾಸ್ತ್ರ ವಿಭಾಗದಲ್ಲಿ ಪಿಎಚ್.ಡಿ. ಪದವಿಯನ್ನು ಪ್ರದಾನ ಮಾಡಿದ್ದು, ಡಾ. ಮಧುಸೂದನ್ ಎ.ಪಿ. ಅವರು ಸಲ್ಲಿಸಿರುವ ಮಹಾಪ್ರಬಂಧವು ಡಾ. ಸತೀಶ್‌ಕುಮಾರ್ .ಎನ್.ಎಸ್. ಅವರು ಭೂಗೋಳಶಾಸ್ತ್ರ ವಿಷಯದಲ್ಲಿ 2016 ರಲ್ಲಿಯೇ ಮಂಡಿಸಿ ಪಡೆದಿರುವ ಮಹಾಪ್ರಬಂಧದ ವಿಷಯವನ್ನು ಯಥಾವತ್ತಾಗಿ ಕೃತಿಚೌರ್ಯ ನಡೆಸಿರುವುದು ಸಾಬೀತಾಗಿದೆಯೆಂದು ತಜ್ಞರ ಸಮಿತಿಯು ನೀಡಿರುವ ಶಿಫಾರಸ್ಸಿನನ್ವಯ ಡಾ. ಮಧುಸೂದನ್ ಎ.ಪಿ ರವರಿಗೆ ಈಗಾಗಲೇ ಪ್ರದಾನ ಮಾಡಲಾಗಿರುವ ಪಿಎಚ್.ಡಿ ಪದವಿಯನ್ನು ಹಿಂಪಡೆಯಲು ಹಾಗೂ ಡಾ. ಮಧುಸೂದನ್ ಎ.ಪಿ. ಅವರ ಮಹಾಪ್ರಬಂಧವನ್ನು Plagiarism Checker ಮಾಡಿರುವ ಉದ್ಯೋಗಿಯ ಮೇಲೆ ಶಿಸ್ತು ಕ್ರಮ ಜರುಗಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/7.9 | ದಿವಂಗತ ಶ್ರೀ ಕಿರಣ್ ಜೆ.ಎಸ್., ಪರಿಚಾರಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗಳಾದ ಕು. ಸುಮನ್ ಜೆ.ಕೆ. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಕು. ಸುಮನ್ ಜೆ.ಕೆ ಇವರಿಗೆ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/7.10 | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ರಚನೆ/ ಪುನರ್‌ರಚನೆ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **2024-2025ನೇ ಶೈಕ್ಷಣಿಕ ಸಾಲಿನಲ್ಲಿ Specialized Programme ಅಡಿಯಲ್ಲಿ ಈ ಕೆಳಕಂಡ ಸಂಸ್ಥೆಗಳಿಗೆ ಮಾನ್ಯತೆ ನೀಡಲಾಗಿರುವ ಕೋರ್ಸುಗಳ ಅಧ್ಯಯನ ಮಂಡಳಿಗಳನ್ನು ರಚಿಸಿ/ಪುನರ್ ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| ಕ್ರ.ಸಂ. | ಸಂಸ್ಥೆಯ ಹೆಸರು | ಕೋರ್ಸ್‌ಗಳ ವಿವರ |
|---|---|---|
| 1 | ಡೀನರು<br>ಕಾವೇರಿ ಕಾಲೇಜ್ ಆಫ್ ಲೈಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, # 131/1, 2D, 2E, 2F, ಕೆ.ಬಿ.ಎಲ್. ಲೇಔಟ್, ದೇವೇಗೌಡ ಸರ್ಕಲ್ ಹತ್ತಿರ, ಮೈಸೂರು | a) Bachelor of Hospital Management<br>b) PG Diploma in coding & Transcription<br>c) PG Diploma in Health Insurance & Records |
| 2 | ಪ್ರಾಂಶುಪಾಲರು<br>ವೋಗ್ ಇನ್ಸ್ಟಿಟ್ಯೂಟ್ ಆಫ್ ಡಿಸೈನ್ C/o ಎ.ಡಿ. ಬಿಳಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ-571 425, ಮದ್ದೂರು ತಾ., ಮಂಡ್ಯ ಜಿಲ್ಲೆ. | M.Des. (Fashion Design & Management) and M.Des. (Interior Design & Management |
| 3 | ನಿರ್ದೇಶಕರು<br>ಆಚಾರ್ಯ ಇನ್ಸ್ಟಿಟ್ಯೂಟ್ ಫಾರ್ ಇನ್ನೊವೇಶನ್ ಅಂಡ್ ಟ್ರಾನ್ಸ್‌ಫಾರ್ಮೇಶನ್ | B.Des (Hons.) (Digital Architecture) (UG) |

| | |
|---|---|
| ಸಾಮಾನ್ಯ ಸಭೆ 2024/7.11 | ದಿನಾಂಕ: 18-07-2024ರಂದು ನಡೆದ ಕ್ರೀಡಾ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗೆಗೆ. |
| ತೀರ್ಮಾನ | ದಿನಾಂಕ: 18-07-2024ರಂದು ನಡೆದ ಕ್ರೀಡಾ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/7.12 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಹಿರಿಯ ಪ್ರಾಧ್ಯಾಪಕಿ ಅಸ್ನಾ ಉರೂಜ್ ದತ್ತಿ ನಗದು ಬಹುಮಾನ" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 31 (2) **(X)** ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು **M.Sc in Food Science and Nutrition** ಪರೀಕ್ಷೆಯಲ್ಲಿ **Nutritional Biochemistry** ವಿಷಯದಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿದ್ದು, ಅತಿ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ "ಹಿರಿಯ ಪ್ರಾಧ್ಯಾಪಕಿ ಅಸ್ನಾ ಉರೂಜ್ ದತ್ತಿ ನಗದು ಬಹುಮಾನ"ವನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/7.13 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "JAYASHREERAM GOLD MEDAL" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 31 (2) (X) ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು M.Sc., in Geographical Information System ವಿಷಯದಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿ, ಅತಿ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ಪರಿಗಣಿಸಿ ಅಂತಹ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದಲ್ಲಿ ಜಯಶ್ರೀರಾಮ್ ಚಿನ್ನದ ಪದಕ ನೀಡುವ ಸಲುವಾಗಿ "JAYASHREERAM GOLD MEDAL" ಅನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2024/7.14 | ಡಾ. ವಿದ್ಯಾ ಆರ್., ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ನೆದರ್‌ಲ್ಯಾಂಡ್ ದೇಶದ ಅಮ್‌ಸ್ಟೆರ್‌ಡಮ್‌ಗೆ ಹೋಗಿಬರಲು ಅನುಮತಿ ನೀಡುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವುದರ ಬಗೆಗೆ. |
| ತೀರ್ಮಾನ | **ಡಾ. ವಿದ್ಯಾ ಆರ್., ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 16-11-2024 ರಿಂದ 02-01-2025 ರವರೆಗೆ ಸ್ವಂತ ಕಾರ್ಯ ನಿಮಿತ್ತ ನೆದರ್‌ಲ್ಯಾಂಡ್ ದೇಶದ ಅಮ್‌ಸ್ಟೆರ್‌ಡಮ್‌ಗೆ ಸ್ನಾತಕ ಪದವಿಯ ಬಿಡುವಿನ ದಿನಗಳನ್ನು (Vacation) ಹಾಗೂ ಅವರ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ವಿಶ್ವವಿದ್ಯಾನಿಲಯವು ವಿಧಿಸಿರುವ ಷರತ್ತಿನೊಂದಿಗೆ ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ 2024/7.15 | ದಿನಾಂಕ: 26.08.2024 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 26.08.2024 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2024/7.16 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 52 ಆಹಾರ ಪದಾರ್ಥಗಳನ್ನು (ತರಕಾರಿಗಳು/ ಸೊಪ್ಪುಗಳು/ ಹಣ್ಣುಗಳು/ ಹಾಲು ಮತ್ತು ಮೊಸರು/ ಮೊಟ್ಟೆ ಮತ್ತು ಚಿಕನ್) ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ, ಇವರು ಆಯ್ಕೆಗೊಂಡಿರುವ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | **ಮುಂದೂಡಲಾಯಿತು.** |
| ಸಾಮಾನ್ಯ ಸಭೆ 2024/7.17 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯಾ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಬೇಕಾಗಿರುವ 39 ಮುಖ್ಯ ಅಡುಗೆಯವರು, 71 ಸಹಾಯಕರು ಹಾಗೂ 53 ಹೆಲ್ಪರ್ಸ್‌ಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಶ್ರೀ ಶಿವಣ್ಣ ಮೆ: ಕಾಂತಿ ಏಜೆನ್ಸಿ ನೆಟ್‌ವರ್ಕ್ಸ್, ಮೈಸೂರು ಸಂಸ್ಥೆಯು ಆಯ್ಕೆಗೊಂಡಿರುವ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | **ಮುಂದೂಡಲಾಯಿತು.** |
| ಸಾಮಾನ್ಯ ಸಭೆ 2024/7.18 | 2023-24ನೇ ಶೈಕ್ಷಣಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಯ ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳಲ್ಲಿನ ನಿಲಯವಾಸಿಗಳಿಗೆ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾದ 81 ದಿನಸಿ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಮೆ: ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ, ಇವರು ಆಯ್ಕೆಗೊಂಡಿರುವ ಹಿನ್ನೆಲೆಯಲ್ಲಿ ಆದೇಶ ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| ತೀರ್ಮಾನ | **ಮುಂದೂಡಲಾಯಿತು.** |

| ಸಾಮಾನ್ಯ ಸಭೆ 2024/7.19 | PROMOTIONS TO UNIVERSITY TEACHERS UNDER UGC-CAS |
|---|---|

ತೀರ್ಮಾನ

**(1) ASSISTANT PROFESSOR TO ASSOCIATE PROFESSOR (From Academic Level 12 to Level 13A)**

| Sl. No. | Name of the Associate Professor | Subject | Date of Interview | Date of reporting to duty as Assistant Professor (AGP Rs. 8000) | Date of Eligibility for reporting to duty as Associate Professor (AGP Rs. 9000) | Remarks |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | Dr. M.Daniel | Philosophy | 27-09-2024 | 22-09-2016 | 22-09-2019 | Recommended |

**(2) ASSISTANT PROFESSOR TO ASSOCIATE PROFESSOR (From Academic Level 12 to Level 13A)**

| Sl. No. | Name of the Associate Professor | Subject | Date of Interview | Date of reporting to duty as Assistant Professor (AGP Rs. 8000) | Date of Eligibility for reporting to duty as Associate Professor (AGP Rs. 9000) | Remarks |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | Dr.H.R.Manjunatha | Geography | 26-09-2024 | 17-01-2020 | 17-01-2023 | Recommended |

**(3) ASSOCIATE PROFESSOR TO PROFESSOR Academic Level 13A to Lever 14 (PG)]**

| Sl. No. | Name of the Associate Professor | Subject | Date of Interview | Date of reporting to duty as Associate Professor (AGP Rs. 9000) | Date of Eligibility for reporting to duty as Professor (AGP Rs. 10000) | Remarks |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | Dr.R.S.Umakanth | Sericulture Science | 26-09-2024 | 30-04-2019 | 30-04-2022 | Recommended |
| 2. | Dr.H.S.Kumara | MURP | 26-09-2024 | 31-03-2020 | 31-03-2023 | Recommended |
| 3. | Dr.Amulya M. | Management Science | 26-09-2024 | 28-03-2020 | 28-03-2023 | Recommended |
| 4. | Dr.M.V.Dinesha | Economics | 26-09-2024 | 21-04-2021 | 21-04-2024 | Recommended |
| 5 | Dr. Shobha V | Ancient History and Archaeology | 27-09-2024 | 18-01-2020 | 18-01-2023 | Recommended |

| | | | | | | |
|---|---|---|---|---|---|---|
| 6 | Dr. Chandramouli | Social work | 27-09-2024 | 05-08-2020 | 02-08-2024 | Recommended |
| 7 | Dr. Jyothi H.P. | Social work | 27-09-2024 | 25-03-2021 | 25-03-2024 | Recommended |
| 8 | Dr. Mahendra.M, | Physics | 27-09-2024 | 23-11-2019 | 23-11-2022 | Recommended |

## (4) ASSOCIATE PROFESSOR TO PROFESSOR FROM ACADEMIC LEVEL 13A TO LEVEL 14 (UG)

| Sl. No. | Name of the Associate Professor | Subject | Date of Interview | Date of reporting to duty as Associate Professor (AGP Rs. 9000) | Date of Eligibility for reporting to duty as Professor (AGP Rs. 10000) | Remarks |
|---|---|---|---|---|---|---|
| 1. | Dr.Venkatesh P. | English | 26-09-2024 | 20-12-2019 | 20-12-2022 | Recommended |
| 2. | Dr.Vijaya Kumar Boratti | English | 26-09-2024 | 02-04-2019 | 02-04-2022 | Recommended |
| 3. | Dr. Suresha | Kannada | 26-09-2024 | 13-02-2021 | 13-02-2024 | Recommended |
| 4 | Dr. Rohitha Eswer | Ancient History and Archaeology | 27-09-2024 | 05-10-2020 | 05-10-2023 | Recommended |
| 5 | Dr. Bhat Satish Shankar | Statistics | 27-09-2024 | 20-07-2020 | 20-07-2023 | Recommended |

## (5) FROM PROFESSOR TO SENIOR PROFESSOR
(from Academic Level-14 to Academic Level-15)

| Sl. No. | Name of the Professor | Subject | Date of Interview | Date of reporting to duty as Professor (AGP Rs. 10000) | Date of Eligibility for reporting to the duty as Senior Professor | Remarks |
|---|---|---|---|---|---|---|
| 1. | Dr. H.S.Aparna | Biotechnology | 26-09-2024 | 15-11-2010 | 15-11-2020 | Recommended |
| 2. | Dr. S. Umesha | Biotechnology | 26-09-2024 | 01-07-2014 | 01-07-2024 | Recommended |
| 3. | Dr. Ramachandra Kini | Biotechnology | 26-09-2024 | 01-07-2014 | 01-07-2024 | Recommended |
| 4. | Dr.H.B.Manjunatha | Sericulture | 26-09-2024 | 01-01-2007 | 18-07-2018 | Recommended |
| 5. | Dr.H.Rajashekar | Commerce | 26-09-2024 | 05-08-2011 | 05-08-2021 | Recommended |
| 6. | Dr.B.Nagaraju | Commerce | 26-09-2024 | 18-04-2013 | 18-04-2023 | Recommended |
| 7. | Dr.N.Nagaraja | Commerce | 26-09-2024 | 19-04-2013 | 19-04-2023 | Recommended |
| 8. | Dr.K.Nagendra Babu | Commerce | 26-09-2024 | 15-03-2013 | 15-03-2023 | Recommended |
| 9. | Dr.Nagendra H.N. | MURP | 26-09-2024 | 21-04-2014 | 21-04-2024 | Recommended |
| 10 | Dr.M.Mahesha | Economics | 26-09-2024 | 24-10-2013 | 24-10-2023 | Recommended |

| | | | | | | |
|---|---|---|---|---|---|---|
| 11 | Dr. Ningamma C.Betsur | Education | 27-09-2024 | 13-07-2013 | 13-07-2023 | Recommended |
| 12 | Dr. J.Somashekar | Ambedkar Studies | 27-09-2024 | 24-02-2009 | 24-02-2019 | Recommended |

Dr.T.R.Chandrashekar, Syndicate Member has submitted his dissent note for the promotion from Professors to Senior Professors (Academic Level 14 to Academic Level 15) in Commerce recommended by the Selection Committee.

**The recommendations of the Selection Committee in various subjects from the post of Assistant Professors/Associate Professors/Professors to the placement of higher positions (Academic Levels) under UGC-CAS furnished below before the Syndicate is approved. Further, the Syndicate has also decided to extend the monitory benefits to the teachers from the date of the University order and subsequent reporting to the post to which they are promoted.**

| | |
|---|---|
| ಸಾಮಾನ್ಯ ಸಭೆ 2024/7.20 | ಡಾ. ಸಿ.ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡುವುದರ ಬಗೆಗೆ. |
| ತೀರ್ಮಾನ | **ಡಾ. ಸಿ.ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 01-11-2024 ರಿಂದ 15-12-2024 ರವರೆಗೆ ಪಿಜಿ ಬಿಡುವಿನ ದಿನಗಳೊಂದಿಗೆ (45 ದಿವಸಗಳು) ದಿನಾಂಕ: 16-12-2024 ರಿಂದ 31-12-2024 ರವರೆಗೆ ಇವರ ಹಕ್ಕಿನಲ್ಲಿರುವ 16 ದಿವಸಗಳ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಒಟ್ಟು 61 ದಿವಸಗಳು ಸ್ವಂತ ಕಾರ್ಯ ನಿಮಿತ್ತ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |

ಇತರೆ ವಿಷಯಗಳು:

1) ಡಾ. ಸಿ. ಬಸವರಾಜುರವರು ಮಾತನಾಡಿ, ಪ್ರೊ. ಜಿ.ಹೇಮಂತ್‌ಕುಮಾರ್ ಅವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಯುವರಾಜ ಕಾಲೇಜಿನ 15-20 ಸಹ ಪ್ರಾಧ್ಯಾಪಕರುಗಳನ್ನು ಸಿಎಎಸ್ ಅಡಿಯಲ್ಲಿ ಪ್ರಾಧ್ಯಾಪಕರುಗಳಾಗಿ ಪದೋನ್ನತಿ ನೀಡುವ ಸಂದರ್ಭದಲ್ಲಿ ಯುಜಿಸಿ ನಿಯಮಾವಳಿಯ ವಿರುದ್ಧವಾಗಿ ಪದೋನ್ನತಿ ನೀಡಿರುವುದು ಗಮನಕ್ಕೆ ಬಂದಿದೆ. ಸದರಿ ಪ್ರಾಧ್ಯಾಪಕರುಗಳಲ್ಲಿ ಕೆಲವರು Guideship ಪಡೆಯದೇ ಯಾವುದೇ ಒಬ್ಬ ಅಭ್ಯರ್ಥಿಗೂ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸದ ಅಧ್ಯಾಪಕರಿಗೂ ಪದೋನ್ನತಿ ನೀಡಿರುವುದು ವಿಶ್ವವಿದ್ಯಾನಿಲಯದ ಘನತೆಗೆ ಕುಂದುಂಟಾಗಿದೆ. ಈ ಅವಧಿಯಲ್ಲಿ ಸಿಎಎಸ್ ಯೋಜನೆಯಡಿಯಲ್ಲಿ ಪದೋನ್ನತಿ ಹೊಂದಿದಂತಹ ಅರ್ಹರಲ್ಲದ ಅಧ್ಯಾಪಕರುಗಳನ್ನು ಗುರುತಿಸಿ ಪದೋನ್ನತಿ ಆದೇಶವನ್ನು ಹಿಂಪಡೆಯುವ ಸಂಬಂಧ ಸಮಿತಿ ರಚಿಸಬೇಕೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, Guideship ಇಲ್ಲದ ಅಧ್ಯಾಪಕರಿಗೂ ಪದೋನ್ನತಿ ನೀಡಿರುವುದು ಸೂಕ್ತವಲ್ಲ. ಈ ಬಗ್ಗೆ ಸಿಂಡಿಕೇಟ್ ಸದಸ್ಯರುಗಳು ಮನವಿಯನ್ನು ಸಲ್ಲಿಸುತ್ತೇವೆ. ಮನವಿಯ ಆಧಾರದ ಮೇಲೆ ಮರುಪರಿಶೀಲಿಸಿ ಅರ್ಹ ಅಧ್ಯಾಪಕರುಗಳಿಗೆ ಮಾತ್ರ ಪದೋನ್ನತಿ ನೀಡಲು ಕ್ರಮ ತೆಗೆದುಕೊಳ್ಳಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಿಎಎಸ್ ಅಡಿಯಲ್ಲಿ ಪದೋನ್ನತಿಗೆ ಸಂಬಂಧಿಸಿದಂತೆ ನಡಾವಳಿಯನ್ವಯ ಕ್ರಮ ತೆಗೆದುಕೊಂಡಿರುತ್ತಾರೆ. ಆ ನಡಾವಳಿಯನ್ನು ತಿದ್ದುಪಡಿ ಮಾಡಬೇಕಾದರೆ ಹಲವು ನಿಯಮಗಳಿರುತ್ತದೆ. ಸಿಂಡಿಕೇಟ್ ಸದಸ್ಯರುಗಳು ಸಲ್ಲಿಸುವ ಮನವಿ ಆಧಾರದ ಮೇಲೆ ಸಮಿತಿಯನ್ನು ರಚಿಸಲಾಗುವುದು. ಆ ಸಮಿತಿಯು ಅಧ್ಯಾಪಕರುಗಳ ದಾಖಲಾತಿಯನ್ನು ಕೂಲಂಕಷವಾಗಿ ಮರುಪರಿಶೀಲಿಸಿ ವರದಿ ಸಲ್ಲಿಸಲು ತಿಳಿಸಲಾಗುವುದೆಂದರು.

2) ಶ್ರೀ ಮಹದೇಶುರವರು ಮಾತನಾಡಿ, ಕಾನೂನು ಅಧ್ಯಯನ ವಿಭಾಗದ ಅತಿಥಿ ಉಪನ್ಯಾಸಕರಾದ ತೇಜಸ್ವಿನಿಯವರು ವಿದ್ಯಾರ್ಥಿಗಳಿಗೆ ತೀವ್ರ ತೊಂದರೆ ನೀಡುತ್ತಿದ್ದಾರೆಂದು ತಿಳಿಸಿದರು.

ಡಾ. ನಟರಾಜ್ ಎಚ್.ಎಸ್. ರವರು ಮಾತನಾಡಿ, ತೇಜಸ್ವಿನಿ, ಅತಿಥಿ ಉಪನ್ಯಾಸಕರು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳಿಗೆ ನಿಮ್ಮನ್ನು ಅನುತ್ತೀರ್ಣಗೊಳಿಸುತ್ತೇನೆಂದು ತಿಳಿಸಿದ್ದು 16 ವಿದ್ಯಾರ್ಥಿಗಳು ತುಂಬಾ ತೊಂದರೆಗೆ ಒಳಗಾಗಿದ್ದಾರೆ. ಒಬ್ಬ ವಿದ್ಯಾರ್ಥಿನಿಯನ್ನು ಎರಡು ಬಾರಿ ಅನುತೀರ್ಣಗೊಳಿಸಿದ್ದಾರೆ. ಆ ವಿದ್ಯಾರ್ಥಿನಿಯು ತಾವು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ನನಗೆ ತಿಳಿಸಿರುತ್ತಾರೆ. ಈ ವಿಷಯವು ಕುಲಸಚಿವರು (ಪರೀಕ್ಷಾಂಗ) ರವರಿಗೂ ಸಹ ತಿಳಿದಿರುತ್ತದೆ. ಮರುಮೌಲ್ಯಮಾಪನವನ್ನು ಸದರಿ ಅತಿಥಿ ಉಪನ್ಯಾಸಕರೇ ಕೈಗೊಂಡಿರುತ್ತಾರೆ. ಉತ್ತರ ಪತ್ರಿಕೆಯನ್ನು ಸಹ ವಿದ್ಯಾರ್ಥಿನಿ ಪಡೆದುಕೊಂಡಿರುತ್ತಾರೆ. ಯಾವ ರೀತಿಯಲ್ಲಿಯೂ ಮೌಲ್ಯಮಾಪನ ಮಾಡಿದರೂ ಅವರಿಗೆ ಉತ್ತೀರ್ಣ ಅಂಕಗಳು ಬರುತ್ತದೆ. ಆದರೂ ಸಹ ಅವರನ್ನು ಅನುತ್ತೀರ್ಣಗೊಳಿಸಲಾಗಿದೆ. ಪ್ರತಿ ನಿತ್ಯ ಕಾನೂನು ವಿಭಾಗದ ವಿದ್ಯಾರ್ಥಿಗಳಿಂದ ತಮಗೆ ದೂರು ಬರುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶುರವರು ಮಾತನಾಡಿ, ಸದರಿ ಅತಿಥಿ ಉಪನ್ಯಾಸಕರ ವಿರುದ್ಧ ಹಲವಾರು ದೂರುಗಳಿವೆ. ಎಷ್ಟೋ ವಿದ್ಯಾರ್ಥಿಗಳು ಅತ್ಮಹತ್ಯೆಗೆ ಪ್ರಯತ್ನಪಟ್ಟಿದ್ದಾರೆ. ಒಬ್ಬ ವಿದ್ಯಾರ್ಥಿಗೆ 20 ಅಂಕಗಳು ಬಂದಿದ್ದು, ಮರುಮೌಲ್ಯಮಾಪನ ಮಾಡಿದ್ದಾಗ 16 ಅಂಕಗಳನ್ನು ನೀಡಿರುತ್ತಾರೆ ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅಸಂಬದ್ಧವಾಗಿ ಮಾತನಾಡುತ್ತಾರೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ನಾನು ಅಂಕ ಕೊಡುವುದು ಇಷ್ಟೇ, ಏನಾದರೂ ಮಾಡಿಕೊಳ್ಳಿ ಎಂದು ಸದರಿ ಅತಿಥಿ ಉಪನ್ಯಾಸಕರು ಹೇಳುತ್ತಾರೆಂದು ತಿಳಿಸಿದರು.

ಡಾ. ನಟರಾಜ್ ಎಸ್ ರವರು ಮಾತನಾಡಿ, ದೂರವಾಣಿ ಮೂಲಕ ಅತಿಥಿ ಉಪನ್ಯಾಸಕರನ್ನು ಸಂಪರ್ಕಿಸಿ ವಿದ್ಯಾರ್ಥಿಗಳಿಂದ ಅವರ ಬಗ್ಗೆ ದೂರು ಬಂದಿರುವುದನ್ನು ತಿಳಿಸಿದಾಗ, ಸದರಿ ಅತಿಥಿ ಉಪನ್ಯಾಸಕರು ನೀವು ಯಾರು ನನಗೆ ದೂರವಾಣಿ ಮಾಡಲು ಎಂದು ತಿಳಿಸಿರುತ್ತಾರೆ. ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿರುತ್ತೇನೆಂದು ತಿಳಿಸಿದರು.

ಡಾ. ಬಸವರಾಜು ಸಿ ಮತ್ತು ಶ್ರೀ ನಾಗರಾಜು ಸಿ ಅವರುಗಳು ಮಾತನಾಡಿ, ಅತಿಥಿ ಉಪನ್ಯಾಸಕರ ವಿರುದ್ಧ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಿ ಎಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಡಾ. ನಟರಾಜ್ ಎಚ್.ಎಸ್ ರವರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಕಾನೂನು ಅಧ್ಯಯನ ವಿಭಾಗಕ್ಕೆ ಸಂಬಂಧಿಸಿದ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಅತಿಥಿ ಉಪನ್ಯಾಸಕರು ಲೋಪವೆಸಗಿದ್ದಾರೆ ಎಂಬುದರ ವಿಷಯವನ್ನು ಪ್ರಸ್ತಾಪಿಸಿದ್ದರು. ಪ್ರಸ್ತುತ ಕಾನೂನು ಅಧ್ಯಯನ ವಿಭಾಗಕ್ಕೆ ಸಂಬಂಧಪಟ್ಟ ಉತ್ತರ ಪತ್ರಿಕೆಗಳನ್ನು ಆಂತರಿಕ ಮೌಲ್ಯಮಾಪನ ಮಾಡಿಸಲಾಗುತ್ತಿದೆ. ಬಿ.ಎ.ಎಲ್‌ಎಲ್‌ಬಿ., ಬಿ.ಕಾಂ.ಎಲ್‌ಎಲ್‌ಬಿ ಪೂರ್ಣಪ್ರಮಾಣದಲ್ಲಿ ಬೇರೆ ಕಡೆಯಿಂದ ಮೌಲ್ಯಮಾಪನ ಕೈಗೊಳ್ಳಲಾಗುತ್ತದೆ. ವಿದ್ಯಾರ್ಥಿಗಳು ಅನುತ್ತೀರ್ಣಗೊಂಡು ಮರು ಮೌಲ್ಯಮಾಪನ ಮಾಡಿಸಿದಾಗ, ಎರಡು ಬಾರಿ ಮರು ಮೌಲ್ಯಮಾಪನ ಮಾಡಲಾಗುತ್ತದೆ. ಮೊದಲನೇ ಮರು ಮೌಲ್ಯಮಾಪನ ಹಾಗೂ ಎರಡನೇ ಮರು ಮೌಲ್ಯಮಾಪನದ

ಅಂಕವನ್ನು ತೆಗೆದುಕೊಂಡು average ಮಾಡಿ divided by two ಮಾಡಿದಾಗ ಹೆಚ್ಚು ಕಡಿಮೆ ಅಂಕಗಳು ಒಂದೇ ರೀತಿ ಬಂದಿರುತ್ತದೆ.

ಒಂದು ಬಾರಿ ಮೌಲ್ಯಮಾಪನ ಮಾಡಿದ ನಂತರ ವಿದ್ಯಾರ್ಥಿಗೆ ಕಡಿಮೆ ಅಂಕ ಬಂದಲ್ಲಿ, ಮರು ಮೌಲ್ಯಮಾಪನಕ್ಕೆ ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಈ ಎರಡು ಮೌಲ್ಯಮಾಪನದಲ್ಲಿ ಹೆಚ್ಚು ಅಂಕ ಗಳಿಸುವ ಅಂಕವನ್ನು (best of the two) ಉಳಿಸಿಕೊಳ್ಳುವ ಆಯ್ಕೆಯನ್ನು ವಿದ್ಯಾರ್ಥಿಗೆ ನೀಡಲಾಗುವುದು ಎಂಬ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಪ್ರಸ್ತಾವನೆಗೆ ಸಿಂಡಿಕೇಟ್ ಸದಸ್ಯರುಗಳಾದ ಡಾ. ಬಸವರಾಜು ಸಿ, ಶ್ರೀ ಗೋಕುಲ್ ಗೋವರ್ಧನ್, ಡಾ. ಟಿ.ಆರ್ ಚಂದ್ರಶೇಖರ್ ಮತ್ತು ಇತರೆ ಸದಸ್ಯರುಗಳು ಎರಡು ಬಾರಿಯ ಮೌಲ್ಯಮಾಪನದಲ್ಲಿ best of the two ಪರಿಗಣಿಸಲು ಸಮ್ಮತಿ ಸೂಚಿಸಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಕಾನೂನು ಅಧ್ಯಯನ ವಿಭಾಗದಲ್ಲಿಯೇ ಮಾತ್ರವಲ್ಲದೇ ಇತರೆ ಅಧ್ಯಯನ ವಿಭಾಗಗಳಲ್ಲಿಯೂ ಸಹ ಈ ರೀತಿಯ ಲೋಪದೋಷಗಳಾಗಿರುವುದು ಕಂಡು ಬಂದಿದೆ. ಮೊದಲನೇ ಬಾರಿಯ ಮೌಲ್ಯಮಾಪನ ಹಾಗೂ ಮರು ಮೌಲ್ಯಮಾಪನಗಳನ್ನು ಇದುವರೆವಿಗೂ ನಿಯಮಗಳನ್ವಯ ಕ್ರಮವಹಿಸಲಾಗಿದೆ. ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಅಥವಾ ಮುಂದಿನ ಶೈಕ್ಷಣಿಕ ವರ್ಷದಿಂದ Digital Valuation ಮಾಡಿಸಲು ಕ್ರಮಕೈಗೊಳ್ಳಲಾಗುವುದು. Digital Valuation ಮಾಡಿಸಿದ್ದಲ್ಲಿ ಯಾವುದೇ ಲೋಪದೋಷಗಳಿರುವುದಿಲ್ಲ. Digital Valuation ನಿಂದ ಹೆಚ್ಚಿನ ಅನುಕೂಲವಾಗುವುದೆಂದು ತಿಳಿಸಿದರು. ಒಂದೇ ವಾರದಲ್ಲಿ ಫಲಿತಾಂಶ ಪ್ರಕಟಿಸಲಾಗುವುದು ಹಾಗೂ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಸಲ್ಲಿಸಬಹುದೆಂದು ತಿಳಿಸಿದರು. 32 ಹಾಳೆಗಳನ್ನು scan ಮಾಡಲಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್ ಚಂದ್ರಶೇಖರ್ ರವರು ಮಾತನಾಡಿ, Digital Valuationನಲ್ಲಿ ತಪ್ಪಾದಾಗ ಮರುಮೌಲ್ಯಮಾಪನಕ್ಕೆ ಸಲ್ಲಿಸಬಹುದಲ್ಲವೇ ಎಂದು ಕೇಳಿದರು.

ಡಾ.ಬಸವರಾಜು ರವರು ಮಾತನಾಡಿ, ಮೌಲ್ಯಮಾಪನ ನಂ.1 ನಡೆಸಿರುತ್ತಾರೆ, ನಂತರ ವಿದ್ಯಾರ್ಥಿಗಳಿಗೆ ಅನುಮಾನ ಬಂದು ಮರುಮೌಲ್ಯಮಾಪನಕ್ಕೆ ಹಾಕಿದಾಗ Digital Valuationನಲ್ಲಿ ಅಂಕ ಸರಿಯಾಗಿ ಬಾರದೇ ಇದ್ದಲ್ಲಿ ತೆಗೆದುಕೊಳ್ಳುವ ಕ್ರಮವೇನು ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, best of the two option ಇರುತ್ತದೆಯೆಂದು ತಿಳಿಸಿದರು.

ಡಾ. ನಟರಾಜ್ ಎಸ್ ರವರು ಮಾತನಾಡಿ, ನಮ್ಮ ಶಿಕ್ಷಕರೇ ಮೌಲ್ಯಮಾಪನ ನಡೆಸುತ್ತಾ ಬಂದಿದ್ದಾರೆ. ಈ ರೀತಿಯ Digital Valuation ನಿಂದ ಸದರಿ ಶಿಕ್ಷಕರುಗಳ ಉದ್ಯೋಗಕ್ಕೆ ತೊಂದರೆಯಾಗುವುದಿಲ್ಲವೇ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಕರೇ ಮೌಲ್ಯಮಾಪನ ಮಾಡುತ್ತಾರೆ. ಆದರೆ ಕೋಡಿಂಗ್/ಡಿ-ಕೋಡಿಂಗ್ ಯಾವುದು ಇರುವುದಿಲ್ಲ. ಗಣಕ ಯಂತ್ರದ ಪರದೆಯಲ್ಲಿ ಸ್ಕ್ಯಾನ್ ಮಾಡಲಾಗಿರುವ ಉತ್ತರ ಪತ್ರಿಕೆಗಳಿದ್ದು, ಸಂಬಂಧಪಟ್ಟ ಶಿಕ್ಷಕರ ಮೊಬೈಲ್‌ಗೆ OTP ಬಂದ ನಂತರ ಮೌಲ್ಯಮಾಪನ ಪ್ರಕ್ರಿಯೆಯನ್ನು ಕೈಗೊಳ್ಳುತ್ತಾರೆ. ದಿನಕ್ಕೆ ಕೇವಲ 16 ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ನಿಗದಿಗೊಳಿಸಲಾಗಿರುತ್ತದೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, Digital Valuation ನಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುವುದಿಲ್ಲವೇ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಭೌತಿಕ ಮೌಲ್ಯಮಾಪನದ ಖರ್ಚಿಗಿಂತಲೂ Digital Valuation ನಿಂದ ಖರ್ಚು ಕಡಿಮೆಯಾಗಬಹುದೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, Digital Valuationನ್ನು ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗಿದೆ. Digital Valuationನಿಂದ ಹೆಚ್ಚಿನ ಅನುಕೂಲಗಳಿವೆ ಹಾಗೂ ಒಟ್ಟು ಅಂಕಗಳು (Total Marks) ತಪ್ಪಾಗಿ ನಮೂದಾಗಲು ಸಾಧ್ಯವಿಲ್ಲವೆಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, Digital Valuation ಪ್ರಕ್ರಿಯೆಯನ್ನು ವಿಶ್ವವಿದ್ಯಾನಿಲಯವೇ ಕೈಗೊಳ್ಳುತ್ತದೆಯೋ ಅಥವಾ ಹೊರಗುತ್ತಿಗೆ ನೀಡಲಾಗುತ್ತದೆಯೇ ಎಂದು ಕೇಳಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ ಯಾವುದೇ ಉತ್ತರ ಪತ್ರಿಕೆಯ ಹಾಳೆಗಳು ಮೌಲ್ಯಮಾಪನವಾಗದೆ ಉಳಿಯುವುದಿಲ್ಲ. ನಮ್ಮ ವಿಶ್ವವಿದ್ಯಾನಿಲಯವೇ Digital Valuation ಪ್ರಕ್ರಿಯೆ ಕೈಗೊಳ್ಳುತ್ತದೆಯೆಂದು ತಿಳಿಸಿದರು.

ಡಾ. ಅಂತೋಣಿ ಪೌಲ್ ರಾಜ್ ಸಿ. ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎಡ್ ಕಾಲೇಜಿನ ಮೌಲ್ಯಮಾಪನವನ್ನು Digital Valuation ಮೂಲಕ ಕೈಗೊಳ್ಳಲಾಯಿತು. ಹಲವಾರು ಸಮಸ್ಯೆಗಳು ಉದ್ಭವವಾಯಿತು. ಇದನ್ನು ಹಿಂದಿನ ಕುಲಸಚಿವ (ಪರೀಕ್ಷಾಂಗ)ರವರ ಗಮನಕ್ಕೆ ಸಹ ತರಲಾಗಿತ್ತು. Digital Valuation ಪ್ರಕ್ರಿಯೆಯಲ್ಲಿ ಮೌಖಿಕವಾಗಿ ನಿರ್ದೇಶನ ನೀಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, Digital Valuation ಏನಾದರೂ ಲೋಪದೋಷಗಳು ಬಂದಲ್ಲಿ ತಕ್ಷಣವೇ ಸಂಯೋಜಕರ ಗಮನಕ್ಕೆ ಬರುತ್ತದೆ. ಅದನ್ನು ಮರುದಿನವೇ ಸರಿಪಡಿಸಲಾಗುತ್ತದೆಯೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಅಧ್ಯಾಪಕರುಗಳು ಸರಿಯಾದ ರೀತಿಯಲ್ಲಿ ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳಿಗೆ ಅಂಕವನ್ನು ನೀಡುವುದು ಶಿಕ್ಷಕರ ಕರ್ತವ್ಯ. ಮೌಲ್ಯಮಾಪನ ಸರಿಯಾಗಿ ಮಾಡದೆ ಇರುವ ಅಧ್ಯಾಪಕರುಗಳ ವಿರುದ್ಧ ಬಂದಂತಹ ಆರೋಪಗಳು ರುಜುವಾತಾದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಮುಂದುವರೆದು, Digital Valuationನಲ್ಲಿ ಸಹ ಸಮಸ್ಯೆಗಳಿದ್ದರೂ ಕೂಡ Digital Valuation ಕೈಗೊಳ್ಳಬೇಕು. ಮೊದಲ ಮೌಲ್ಯಮಾಪನ ಹಾಗೂ ಮರುಮೌಲ್ಯಮಾಪನ ಕೈಗೊಂಡು ಮೊದಲನೇ ಮೌಲ್ಯಮಾಪನದಲ್ಲಿ 70 ಅಂಕಗಳಿಗೆ 15 ಅಂಕ ಬಂದಿದ್ದು, ಎರಡನೇ ಮೌಲ್ಯಮಾಪನದಲ್ಲಿ 45 ಬಂದಿರುತ್ತದೆ. 13ಕ್ಕಿಂತ ಹೆಚ್ಚು ಅಂಕ ಬಂದಲ್ಲಿ ಮೂರನೇ ಮೌಲ್ಯಮಾಪನ ಮಾಡಿಸುವ ಪದ್ಧತಿ ನಮ್ಮ ವಿಶ್ವವಿದ್ಯಾನಿಲಯದಲ್ಲಿದೆ. ಮೊದಲ ಮೌಲ್ಯಮಾಪನ ಮತ್ತು ಮರುಮೌಲ್ಯಮಾಪನದಲ್ಲಿ ಹೆಚ್ಚಿನ ಅಂಕಗಳ ವ್ಯತ್ಯಾಸವಾದಲ್ಲಿ, ಮೂರನೇ ಮೌಲ್ಯಮಾಪನವೇ ಅಂತಿಮವಾಗುತ್ತದೆ. Digital Valuationನಿಂದ ಫಲಿತಾಂಶವನ್ನು ತ್ವರಿತಗತಿಯಲ್ಲಿ ಪ್ರಕಟಿಸಬಹುದೆಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಮುಂದಿನ ಮೂರು ವರ್ಷ ಬಿ.ಎ.ಎಲ್.ಎಲ್.ಬಿ, ಬಿ.ಕಾಂ.ಎಲ್.ಎಲ್.ಬಿ ವಿಷಯವನ್ನು ಅತಿಥಿ ಉಪನ್ಯಾಸಕರಿಂದ ಮೌಲ್ಯಮಾಪನ ಮಾಡಿಸುವುದಿಲ್ಲ

ಹಾಗೂ digital screen based valuationನಿಂದ ಎಲ್ಲಾ ಮೌಲ್ಯಮಾಪನದ ನ್ಯೂನತೆಗಳನ್ನು ಸರಿಪಡಿಸಲು ಸಾಧ್ಯವೆಂದು ತಿಳಿಸಿದರು.

3) ಹಿಂದಿನ ಸಿಂಡಿಕೇಟ್ ಸಭೆಯಲ್ಲಿ OBC ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿದ್ದು, ಈ ವಿಷಯದ ಅದಷ್ಟು ಶೀಘ್ರವಾಗಿ ಕ್ರಮವಹಿಸಬೇಕೆಂದು ಡಾ. ಶಿಲ್ಪ ಜೆ ರವರು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, OBC ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಪರಿಷ್ಕರಿಸುವುದರ ಕುರಿತು ಈಗಾಗಲೇ ಸಮಿತಿಯನ್ನು ರಚಿಸಿದ್ದು, ಸಮಿತಿಯು ಸಭೆಯನ್ನು ನಡೆಸಿದ್ದು, ಸಮಿತಿಯು ಸಲ್ಲಿಸುವ ವರದಿಯನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿದರು.

4) ಡಾ. ಬಸವರಾಜು ಸಿ. ರವರು ಮಾತನಾಡಿ, ಪ್ರೊ. ವಿಜಯಕುಮಾರಿ ಎಸ್ ಕರಿಕಲ್ ರವರ ಮಾರ್ಗದರ್ಶನದಡಿಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಶ್ರೀ ಅರುಣ್ ಎಂಬುವರು ಕಾರ್ಯನಿರ್ವಹಿಸುತ್ತಿದ್ದು, ಪ್ರೊ ವಿಜಯಕುಮಾರಿ ಎಸ್ ಕರಿಕಲ್ ರವರ ಅನಾರೋಗ್ಯದ ಹಿನ್ನೆಲೆಯಲ್ಲಿ ಪಿಹೆಚ್.ಡಿ. ಮಹಾಪ್ರಬಂಧವನ್ನು ನಿಗದಿತ ಅವಧಿಯೊಳಗೆ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕನ್ನಡ ಅಧ್ಯಯನ ಮಂಡಳಿಯ ಅಧ್ಯಕರ ಮೂಲಕ ಅಥವಾ ಸಂಬಂಧಪಟ್ಟ ವಿಭಾಗದ ನಿರ್ದೇಶಕರಾದ ಪ್ರೊ. ಎನ್.ಕೆ.ಲೋಲಾಕ್ಷಿಯವರು ಈ ವಿಷಯದ ಕುರಿತು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಲ್ಲಿ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ) ರವರು ಮಾತನಾಡಿ, ಈ ರೀತಿಯ ಇನ್ನೊಂದು ಪ್ರಕರಣದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರ ಮೂಲಕ ಮಹಾಪ್ರಬಂಧ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿಯಲ್ಲಿ ಶ್ರೀ ಅರುಣ್ ರವರು ಸಹ ಮಹಾಪ್ರಬಂಧ ಮಂಡಿಸಬಹುದಾಗಿದೆ ಎಂದು ತಿಳಿಸಿದರು.

ಮುಂದುವರೆದು, ಡಾ. ಬಸವರಾಜುರವರು ಮಾತನಾಡಿ, ಶ್ರೀ ಅರುಣ್‌ರವರಿಗೆ ಮಹಾಪ್ರಬಂಧ ಸಲ್ಲಿಸಲು ಹೆಚ್ಚುವರಿಯಾಗಿ 06 ತಿಂಗಳ ಕಾಲಾವಕಾಶ ನೀಡಬೇಕೆಂದು ಮತ್ತೊಮ್ಮೆ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ ಅರುಣ್‌ರವರಿಗೆ ಮಹಾ ಪ್ರಬಂಧ ಸಲ್ಲಿಸಲು ಹೆಚ್ಚುವರಿಯಾಗಿ 06 ತಿಂಗಳ ಕಾಲಾವಕಾಶ ನೀಡಲಾಗುವುದೆಂದು ತಿಳಿಸಿದರು.

5) ಶ್ರೀ ನಾಗರಾಜು ರವರು ಮಾತನಾಡಿ, ಶ್ರೀ ಜೆ ಶಿವಕುಮಾರ್‌ರವರು ಯುವರಾಜ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಶುಲ್ಕದ ರೂಪದಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಒಂದೂವರೆ ಕೋಟಿ ಮೊತ್ತದಲ್ಲಿ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಪ್ರಸ್ತುತ ಎಸ್‌ಸಿ/ಎಸ್‌ಟಿ ವಿಶೇಷ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಪೋಲೋ ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಂಡು ಸದರಿ ಚಿಕಿತ್ಸೆಯ ಮರುಭರಿಕೆ ಹಣವನ್ನು ಸಹ ವಿಶ್ವವಿದ್ಯಾನಿಲಯ ಮಂಜೂರು ಮಾಡಿದೆ. ಸದರಿಯವರಿಂದ ವಿದ್ಯಾರ್ಥಿಗಳಿಗೆ ಹಾಗೂ ವಿಶ್ವವಿದ್ಯಾನಿಲಯಕ್ಕೆ ಅನ್ಯಾಯವಾಗಿದೆ. ತಕ್ಷಣ ಕಾನೂನು ಕ್ರಮಕೈಗೊಂಡು ಅವರನ್ನು ಅಮಾನತ್ತುಗೊಳಸಬೇಕೆಂದು ಆಗ್ರಹಿಸಿದರು.

ಕುಲಸಚಿವರು ಮಾತನಾಡಿ, ಶಿವಕುಮಾರ್‌ರವರು ತೀವ್ರ ನಿಗಾ ಘಟಕದಲ್ಲಿ ಇದ್ದ ಸಂದರ್ಭದಲ್ಲಿ ಅವರ ಪತ್ನಿ ಅತಿಥಿ ಉಪನ್ಯಾಸಕಿಯಾಗಿ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮಾನವೀಯತೆಯ ದೃಷ್ಟಿಯಿಂದ ಚಿಕಿತ್ಸೆಗಾಗಿ ವೈದ್ಯಕೀಯ ವೆಚ್ಚವನ್ನು ಮರುಭರಿಸಲಾಗಿದೆ.

ಶ್ರೀ ನಾಗರಾಜು ರವರು ಮಾತನಾಡಿ, ವಿಚಾರಣೆಯನ್ನು ತ್ವರಿತಗತಿಯಲ್ಲಿ ನಡೆಸಿ, ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ನಮ್ಮ ಮನವಿಯೇನೆಂದರೆ ಈಗಾಗಲೇ ರಚನೆಯಾಗಿರುವ ಸಮಿತಿಯು ಅದಷ್ಟು ಶೀಘ್ರವಾಗಿ ವಿಚಾರಣೆಯನ್ನು ಕೈಗೊಂಡು ವರದಿಯನ್ನು ನೀಡುವುದರ ಕುರಿತು ಕ್ರಮವಹಿಸುವಂತೆ ಸಮಿತಿಗೆ ಮತ್ತೊಮ್ಮೆ ಸೂಚಿಸಬೇಕೆಂದು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ನಿವೃತ್ತ ನ್ಯಾಯಾಧೀಶರನ್ನು ಶೀಘ್ರವಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಎಂದು ತಿಳಿಸಲು ಸಾಧ್ಯವಿಲ್ಲವೆಂದು ಹೇಳಿದರು.

6) ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 97 ಯುಎಂವಿ 2024, ಬೆಂಗಳೂರು ದಿನಾಂಕ: 15-10-2024ರ ಪತ್ರದಲ್ಲಿ ತಿಳಿಸಿರುವಂತೆ ಸಿಂಡಿಕೇಟ್ ಸದಸ್ಯರ ಸಭಾ ಭತ್ಯೆಯನ್ನು ರೂ.7,000/- ಗಳಿಂದ ರೂ. 5,000/- ಕ್ಕೆ ಮಿತಿಗೊಳಿಸುವಂತೆ ಆದೇಶಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ಪ್ರಸ್ತುತ ಸಿಂಡಿಕೇಟ್ ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ಯೆ ರೂ.7,000/-ಗಳಿಗೆ ಸರ್ಕಾರಿ ಲೆಕ್ಕ ಪರಿಶೋಧಕರು ಆಕ್ಷೇಪಿಸಿ, ಹೆಚ್ಚುವರಿಯಾಗಿ ಪಾವತಿಸಿರುವ ರೂ.2,000/-ಗಳನ್ನು ಸಂದಾಯ ಮಾಡುವಂತೆ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಸಿಂಡಿಕೇಟ್ ಸದಸ್ಯರುಗಳಿಗೆ ನೀಡುತ್ತಿರುವ ಸಭಾ ಭತ್ಯೆ ರೂ.7,000/-ಗಳಿಗೆ ಬದಲಾಗಿ ರೂ.5,000/-ಗಳಿಗೆ ಮಿತಿಗೊಳಿಸಲು ಆದೇಶಿಸಿದೆ ಎಂದು ತಿಳಿಸಿದರು.

**ತೀರ್ಮಾನ : ಸಭಾಭತ್ಯೆ ನಿಗಧಿಪಡಿಸುವ ಸಂಬಂಧ ಸರ್ಕಾರವು ನಿರ್ದೇಶಿಸಿರುವಂತೆ ರೂ. 5,000/-ಗಳಿಗೆ ಸಭಾಭತ್ಯೆಯನ್ನು ನೀಡಲು ಸಭೆಯು ಅನುಮೋದಿಸಿತು.**

7) **2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**

8) ಶ್ರೀ ನಾಗರಾಜು ಸಿ. ಅವರು ಮಾತನಾಡಿ, ವಿಶ್ವವಿದ್ಯಾನಿಲಯ ಅತಿಥಿಗೃಹದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರನ್ನು ಕೂಡಲೇ ಬದಲಾಯಿಸುವಂತೆ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕೇತರುಗಳ ಸಂಖ್ಯೆ ಕಡಿಮೆ ಇದ್ದು, ವಿಶ್ವವಿದ್ಯಾನಿಲಯ ಅತಿಥಿಗೃಹದಲ್ಲಿ ಕಾರ್ಯನಿರ್ವಹಿಸಲು ಖಾಯಂ ಉದ್ಯೋಗಿಯನ್ನೇ ನಿಯೋಜಿಸಬೇಕಾಗಿರುತ್ತದೆ. ಈ ಸಂಬಂಧ ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಅಂತಿಮವಾಗಿ, ಮಾನ್ಯ ಕುಲಸಚಿವರು 7ನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ, ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಸಭಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿ ಹಾಗೂ ಅಧ್ಯಕ್ಷರು**